# ಬದ್ಧತೆಯ ಬಲ

ಬದ್ಧತೆಯ ಬಲ



ಉಚಿತವಾದ ಹಂಚಿಕೆಗಾಗಿ ಮಾತ್ರ
ಮುದ್ರಣ ಮತ್ತು ಹಂಚಿಕೆ : **ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್‌ರೀಚ್, ಬೆಂಗಳೂರು**
ಪ್ರಥಮ ಪ್ರತಿ : ಡಿಜಿಟಲ್ ಬಿಡುಗಡೆ ಜುಲೈ 2020

ಕನ್ನಡಕ್ಕೆ ಭಾಷಾಂತರಿಸಿದವರು: ರವಿಕುಮಾರ್ ಎಂ.
ಮುಖಪುಟ ಮತ್ತು ವರ್ಣವಿನ್ಯಾಸ: ಕರುಣಾ ಜೆರೋಮ್, ಬ್ರೈಟ್ಫೈಯ್ಡ್ ಡಿಸೈನ್ಸ್

Contact Information:
All Peoples Church & World Outreach,
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617
Email: bookrequest@apcwo.org
Website: apcwo.org

Unless otherwise indicated, all Scripture quotations are taken from the Holy Bible, New King James Version. Copyright © 1982 by Thomas Nelson, Inc., Used by permission. All rights reserved.

Scriptures marked as "(MSG)" are taken from THE MESSAGE: The Bible in Contemporary Language copyright 2002 by Eugene H. Peterson.

Scriptures marked as "(GNB)" are taken from the GNB – Second Edition © 1992 by American Bible Society. Used by permission.

**ಉಚಿತ ವಿತರಣೆಗಾಗಿ**

ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಸ್ನೇಹಿತರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ವಂದನೆಗಳು!

**ಮೇಲಿಂಗ್ ಪಟ್ಟಿ ಮತ್ತು ಉಚಿತ ಹೆಚ್ಚುವರಿ ಪುಸ್ತಕಗಳಿಗಾಗಿ**

ಹೊಸ ಪುಸ್ತಕಗಳು ಮುದ್ರಣವಾದಾಗ ಅವುಗಳನ್ನು ಪಡೆದುಕೊಳ್ಳಲು ದಯವಿಟ್ಟು ನಿಮ್ಮ ಸರಿಯಾದ ಅಂಚೆ ವಿಳಾಸ ಮತ್ತು ಯಾವ ಭಾಷೆಗಳಲ್ಲಿ ಪುಸ್ತಕಗಳು ಬೇಕೆಂಬುದನ್ನು ನಮ್ಮೊಂದಿಗೆ ಹಂಚಿಕೊಳ್ಳಿರಿ. ನಾವು ನಿಮ್ಮ ಸಭೆಯಲ್ಲಿ, ಸತ್ಯವೇದ ಅಧ್ಯಯನ ಗುಂಪು, ಸತ್ಯವೇದ ಶಾಲೆ, ಸೆಮಿನಾರ್ ಮುಂತಾದವುಗಳಿಗಾಗಿ ಹೆಚ್ಚಿನ ಪುಸ್ತಕಗಳನ್ನು ಕಳುಹಿಸಲು ನಾವು ಸಂತೋಷವುಳ್ಳವರಾಗಿದ್ದೇವೆ. ನಿಮಗೆ ಎಷ್ಟು ಪುಸ್ತಕಗಳು ಬೇಕೆಂಬುದನ್ನು ನಮಗೆ ತಿಳಿಸಿರಿ. ನಾವು ಅವುಗಳನ್ನು ನಿಮಗೆ ಕಳುಹಿಸುತ್ತೇವೆ.

(Kannada Book - The Power of Commitment)

# ಬದ್ಧತೆಯ ಬಲ

# ಪರಿವಿಡಿ


| | | |
|---|---|---|
| 1. | ಪೀಠಿಕೆ | 1 |
| 2. | ಒಬ್ಬ ಬದ್ಧತೆಯುಳ್ಳ ವ್ಯಕ್ತಿಯ ಗುಣಲಕ್ಷಣಗಳು | 3 |
| 3. | ಬದ್ಧತೆಯಿಂದಿರುವುದರ ಮೌಲ್ಯ | 6 |
| 4. | ನೀವು ಬದ್ಧತೆಯುಳ್ಳವರಾಗಿದ್ದೀರಾ? | 10 |

# 1

# ಪೀಠಿಕೆ

ಬದ್ಧತೆ ಎಂಬುವಂತದ್ದು ಸಭೆಯಲ್ಲಿ ಮತ್ತು ಜಾತ್ಯತೀತ ಪ್ರಪಂಚದರೆಡರಲ್ಲೂ ಇಂದಿನ ದಿನಗಳಲ್ಲಿ ಬಹಳ ಕಠಿಣವಾಗಿ ಕಂಡುಬರುವ ಒಂದು ಸದ್ಗುಣವಾಗಿದೆ. ನಮ್ಮಲ್ಲಿ ಅನೇಕರು ಅನೂಕೂಲಕರವಾದದ್ದನ್ನು ಮಾಡುತ್ತಾರೆ. ಬದ್ಧತೆಯಿಂದಯಿರುವ ಜನರು ಹೆಚ್ಚು ಕಷ್ಟಕರವಾಗಿ ಕಂಡು ಬರುವುದನ್ನು ಗುರ್ತಿಸುತ್ತೇವೆ.

ಬದ್ಧತೆಯಿಂದ ಇರುವುದು ಎಂಬುದರ ಅರ್ಥವೇನು? ಒಂದು ನಿರ್ದಿಷ್ಟ ಕಾರಣಕ್ಕಾಗಿ ನಂಬಿಗಸ್ತರಾಗಿ ಇರುವುದು ಎಂಬುದು ಇದರ ಅರ್ಥವಾಗಿದೆ. ಜವಾಬ್ದಾರಿಯ ಪ್ರಜ್ಞೆಯನ್ನು ಹೊಂದಿರುವುದು ಇದರ ಅರ್ಥವಾಗಿದೆ. ನಾವು ಕೆಲವು ಬದಲಾಗದ ಮತ್ತು ಉದ್ದೇಶ ಪೂರ್ವಕವಾದ ಆಯ್ಕೆಯನ್ನು ಮಾಡುವುದು ಮತ್ತು ಅದಕ್ಕೆ ಅಂಟಿಕೊಂಡಂತೆ ಇರುವುದು ನಮ್ಮ ಬದ್ಧತೆಯಾಗಿರುತ್ತದೆ. ಬದ್ಧತೆಯಿಂದಿರುವುದೆಂದರೆ ಯಾವುದಾದರೊಂದರ ಕಡೆಗೆ ನಮ್ಮ ಪರಿಶ್ರಮವನ್ನು ವ್ಯಕ್ತಪಡಿಸುವುದಾಗಿದೆ.

ಉದಾಹರಣೆಗೆ, ನಾವು ಮಾತನಾಡುವ ಮಾತುಗಳನ್ನು ಪರಿಗಣಿಸಿರಿ, ನಾವು ಸಮಯದ ಕುರಿತು ಮಾಡುವಂತಹ ವಾಗ್ದಾನಗಳನ್ನು ಆಲೋಚಿಸಿರಿ 'ಯಾರೋ ಒಬ್ಬರನ್ನು ನಿರ್ದಿಷ್ಟ 'ಸಮಯದಲ್ಲಿ' ಭೇಟಿ ಮಾಡುತ್ತೇವೆ ಎಂಬುದಾಗಿ ನಾವು ಹೇಳುತ್ತೇವೆ ಮತ್ತು ಆಮೇಲೆ ಅದರ ಕುರಿತು ಪ್ರಾಸಂಗಿಕವಾಗಿರುತ್ತೇವೆ. ನಾವು ಅರ್ಧಗಂಟೆ ತಡವಾಗಿ ಆಗಮಿಸಬಹುದು ಮತ್ತು ಇದು ಪರಿಪೂರ್ಣವಾಗಿ ಸರಿಯಾಗಿದೆ ಎಂಬುದಾಗಿ ಆಲೋಚಿಸುತ್ತಾರೆ ಆದರೆ ಇದು ನಮ್ಮ ಮಾತುಗಳಿಗೆ ನಾವು ಬದ್ಧತೆಯಿಂದಿಲ್ಲ ಎಂಬುದನ್ನು ಇದು ತೋರಿಸುತ್ತದೆ. ಯಾರನ್ನಾದರೂ ನಿಗದಿತ ಸಮಯದಲ್ಲಿ ಭೇಟಿ ಮಾಡುತ್ತೇನೆ ಎಂಬುದಾಗಿ ಹೇಳಿದರೆ ಆದಕ್ಕೆ ನಾವು ವಚನ ಬದ್ಧತೆಯಿಂದ ಇರಬೇಕು. ಸಭಾಪಾಲಕರು ಮತ್ತು ದೇವರ ಸೇವಕರುಗಳು ಸಮಯವನ್ನು ಸರಿಯಾಗಿ ಇರಿಸುವುದರ ವಿಷಯಕ್ಕೆ ಬರುವಾಗ ಅವರು ಉದಾಸೀನವಾಗಿರುವುದನ್ನು ಕೆಲವು ಸಾರಿ ನೋಡುವುದರ ಕುರಿತು ಹೇಳಲು ನಾನು

ನಾಚಿಕೆಯುಳ್ಳವನಾಗಿದ್ದೇನೆ. ನೀವು ದೇವರ ಒಬ್ಬ ಸೇವಕನಾಗಿದ್ದರೆ, ಸಮಯವನ್ನು ಸರಿಯಾಗಿ ಪಾಲಿಸುವುದರ ಬಗ್ಗೆ ಲೆಕ್ಕಿಸುವದರೊಡನೆ ನಿಮ್ಮ ಮಾತುಗಳ ವಚನ ಬದ್ಧತೆಯನ್ನು ತೋರಿಸುವಂತಹ ಕ್ಷೇತ್ರವು ಅಧಿಕವಾಗಿ ಪ್ರಾಮುಖ್ಯವುಳ್ಳದ್ದಾಗಿದೆ. ನೀವು ಯಾವುದಾದರೊಂದನ್ನು ಹೇಳಿದರೆ, ಅದಕ್ಕೆ ಅರ್ಥವುಳ್ಳವರಾಗಿರಿ ಮತ್ತು ಅದನ್ನು ಸರಿಯಾಗಿರಿಸಲು ಪ್ರಯತ್ನಗಳನ್ನು ಮಾಡಿರಿ.

ಸತ್ಯವೇದವು ಬದ್ಧತೆಯಿಂದಿರುವುದರ ಕುರಿತು ನಮಗೆ ಬೋಧಿಸುತ್ತದೆ. ''ಯಾವನೂ ಇಬ್ಬರು ಯಜಮಾನರಿಗೆ ಸೇವೆ ಮಾಡಲಾರನು. ಅವನು ಒಬ್ಬನನ್ನು ದ್ವೇಷಿಸಿ ಮತ್ತೊಬ್ಬನನ್ನು ಪ್ರೀತಿಸುವನು ಇಲ್ಲವೆ ಒಬ್ಬನನ್ನು ಹೊಂದಿಕೊಂಡು ಮತ್ತೊಬ್ಬನನ್ನು ತಾತ್ಸಾರ ಮಾಡುವನು ನೀವು ದೇವರನ್ನೂ ಧನವನ್ನೂ ಕೂಡ ಸೇವಿಸಲಾರಿರಿ.'' (ಮತ್ತಾಯ 6:24) ಎಂಬುದಾಗಿ ಕರ್ತನಾದ ಯೇಸುವು ವ್ಯಾಖ್ಯಾನಿಸಿದ್ದಾನೆ. ನಮ್ಮ ಅಂತರ್ಗತವಾಗಿರುವ ಇಂತಹ ಸ್ವಭಾವವನ್ನು ಇಲ್ಲಿ ಯೇಸುವು ವಿವರಿಸುತ್ತಾನೆ. ಒಬ್ಬರಿಗೊಬ್ಬರು ವಿರುದ್ಧವಾದ ಎರಡು ಬದ್ಧತೆಯನ್ನು ಮನುಷ್ಯನು ನೆರವೇರಿಸಲಾಗದು. ಉದಾಹರಣೆಗೆ ನಾವು ದೇವರು ಮತ್ತು ಪ್ರಪಂಚ ಎರಡಕ್ಕೂ ಸೇವೆ ಸಲ್ಲಿಸಲು ಸಾಧ್ಯವಿಲ್ಲ. ಬೇರೆದರಕ್ಕಿಂತ ಒಂದಕ್ಕೆ ಮಾತ್ರ ನಾವು ಬದ್ಧತೆಯಿಂದಿರುವರಾಗಿದ್ದೇವೆ. ಪ್ರಪಂಚದ ಸ್ನೇಹಿತ ಮತ್ತು ದೇವರ ಸ್ನೇಹಿತನಾಗಿರುವುದು ಬಹಳ ಸಾಧ್ಯಕರವಾಗಿರುವುದಿಲ್ಲ. ''ವ್ಯಭಿಚಾರಿಗಳು ನೀವು ಇಹಲೋಕ ಸ್ನೇಹವು ದೇವವೈರವೆಂದು ನಿಮಗೆ ತಿಳಿಯದೋ ಲೋಕಕ್ಕೆ ಸ್ನೇಹಿತನಾಗಬೇಕೆಂದಿರುವವನು ತನ್ನನ್ನು ದೇವರಿಗೆ ವಿರೋಧಿಯನ್ನಾಗಿ ಮಾಡಿಕೊಳ್ಳುತ್ತಾನೆ'' (ಯಾಕೋಬನು 4:4). ಒಬ್ಬ ಸ್ನೇಹಿತರಾಗಿರುವುದು ಅಥವಾ ಇಹಲೋಕದ ಒಬ್ಬ ಸ್ನೇಹಿತರಾಗಿ ಎರಡರಲ್ಲಿ ಒಂದಾಗಿ ನಾವು ಕಂಡುಬರುತ್ತೇವೆ. ಎರಡು ರೂಪತೆಯ ಬದ್ಧತೆ ಇಲ್ಲ. ನಾವು ಒಬ್ಬ ಯಜಮಾನನಿಗೆ ಮಾತ್ರ ಬದ್ಧತೆಯಿಂದಿರಬೇಕು. ಆತನಿಗೆ ನಾವುಗಳು ಬದ್ಧತೆಯಿಂದಿರಬೇಕೆಂಬುದಾಗಿ ಯೇಸುವು ಕರೆಯುತ್ತಾನೆ ಮತ್ತು ಕ್ರಿಸ್ತನ ಅಂಗದೊಳಗೆ ಬಲಿಷ್ಟವಾಗದ ಬದ್ಧತೆಯು ಕಟ್ಟಲ್ಪಡಬೇಕು. ಈ ಪುಸ್ತಕವು ಬದ್ಧತೆಯ ಬಲದ ಮೇಲೆ ಮಹತ್ವ ನೀಡುತ್ತದೆ ಮತ್ತು ನೀವು ಮಾಡುವಂತಹದ್ದರಲ್ಲಿ ಬದ್ಧತೆಯಿಂದಿರಬೇಕೆಂಬುದಾಗಿ ಸ್ಫೂರ್ತಿ ನೀಡುತ್ತದೆ.

> **ಬದ್ಧತೆ**
>
> ಬದ್ಧತೆಯು ಒಂದು ಶಿಸ್ತು ಆಗಿದೆ. ಇದು ನಾವು ಮಾಡುವಂತಹ ಒಂದು ಜಾಗರೂಕತೆಯಾಗಿದೆ. ಒಬ್ಬರಿಗೊಬ್ಬರು ವಿರುದ್ಧವಾಗಿರುವ ಎರಡು ಬದ್ಧತೆಗಳನ್ನು ಮನುಷ್ಯನು ಹೊಂದಿರಲೂ ಸಾಧ್ಯವಿಲ್ಲ.

# 2

# ಒಬ್ಬ ಬದ್ಧತೆಯುಳ್ಳ ವ್ಯಕ್ತಿಯ ಗುಣಲಕ್ಷಣಗಳು

ನಾವು ನಿಜವಾಗಿಯು ಏನಾದರೊಂದಕ್ಕೆ ಬದ್ಧತೆಯಿಂದ ಇದ್ದೇವೆ ಎಂಬುದಾಗಿ ಹೇಗೆ ಹೇಳಬಹುದು?

## ಯಾವುದೇ ಮೌಲ್ಯ ಪಾವತಿಸಲು ಅನುಮತಿಸುವುದು

ಒಬ್ಬ ವ್ಯಕ್ತಿಯು ದೇವರ ಕರೆಗೆ ಬದ್ಧತೆಯಿಂದಿದ್ದರೆ, ಆ ಒಂದು ಕರೆಯನ್ನು ನೆರವೇರಿಸಲು ಯಾವುದೇ ಮೌಲ್ಯವನ್ನು ಪಾವತಿಸಲು ಅವನು ಸಮ್ಮತಿಸಿದವನಾಗಿರಬೇಕು. ಕೆಲವು ಜನರು ದೇವರ ಸೇವೆ ಮಾಡಲೂ ಬಯಸುತ್ತಾರೆ ಆದರೆ ಅವರು ಇರಬೇಕೆಂಬುದಾಗಿ ದೇವರು ಅಪೇಕ್ಷಿಸುವ ಸ್ಥಳಕ್ಕೆ ಅವರು ತಲುಪಿಸಲು ಶ್ರಮಪಟ್ಟು ಕೆಲಸ ಮಾಡಲೂ ಅಸಮ್ಮತಿಸುತ್ತಾರೆ. ನಿಮ್ಮ ಜೀವಿತಕ್ಕೆ ದೇವರ ಕರೆ ಮತ್ತು ಒಂದು ಉದ್ದೇಶ ಹೊಂದಿದ್ದಾಗಲೂ ಸಂಗತಿಗಳು ಸ್ವಯಂಚಾಲಿತವಾಗಿ ತೆರೆದುಕೊಳ್ಳುವುದಿಲ್ಲ. ದೇವರೊಡನೆ ನೀವು ಜೊತೆಕೆಲಸದವರಾಗಿದ್ದಾರೆ ಮತ್ತು ಒಬ್ಬ ಕೆಲಸಗಾರರು ಕೆಲಸ ಮಾಡಲೂ ಅಗತ್ಯವಿದೆ! ನಿಮ್ಮ ಜೀವಿತಗಳಲ್ಲಿ ಆತನ ಉದ್ದೇಶಗಳನ್ನು ತೆರೆಯುವ ಕ್ರಮದಲ್ಲಿ ಅನೇಕ ತ್ಯಾಗಗಳನ್ನು ಮಾಡಲೂ ದೇವರು ಕರೆಯಬಹುದು. ದೇವರ ಉದ್ಧೇಶಗಳಿಗೆ ನೀವು ಸತ್ಯವಾಗಿ ಬದ್ಧತೆಯಿಂದಿದ್ದರೆ ಆ ಮೇಲೆ ಆತನು ನಿಮ್ಮಿಂದ ಅಪೇಕ್ಷಿಸುವ ತ್ಯಾಗಗಳನ್ನು ನೀವು ಮಾಡಬೇಕಾಗುತ್ತದೆ.

''ಅವರು ಪ್ರಾಣದ ಮೇಲಣ ಪ್ರೀತಿಯನ್ನು ತೊರೆದು ಮರಣಕ್ಕೆ ಹಿಂತೆಗೆಯದೆ ಯಜ್ಞದ ಕುರಿಯಾದಾತನ ರಕ್ತದ ಬಲದಿಂದಲೂ ತಮ್ಮ ವಾಕ್ಯದ ಬಲದಿಂದಲೂ ಅವನನ್ನು ಜಯಿಸಿದರು ಎಂಬುದಾಗಿ ನಿರ್ದಿಷ್ಟ ವಿಶ್ವಾಸಿಗಳು ಕುರಿತು ಸತ್ಯವೇದವು ವ್ಯಾಖ್ಯಾನಿಸುತ್ತದೆ. ಇಂತಹ ಜನರು ಕರ್ತನಾದ ಯೇಸು ಕ್ರಿಸ್ತನಿಗೆ ಬಹಳ ಬದ್ಧತೆಯುಳ್ಳವರು, ಅವರ ಜೀವಿತಗಳನ್ನು ಮರಣಕ್ಕೆ ಒಪ್ಪಿಸಿಕೊಡುವಷ್ಟು ಶಕ್ತರಾದವರಾಗಿದ್ದಾರೆ. ನಾವು ಕರ್ತನಾದ ಯೇಸುವಿಗೆ ಬದ್ಧತೆಯಿಂದಿದ್ದರೆ, ನಮ್ಮ ಯಜಮಾನನಿಗೆ ನಮ್ಮ ಜೀವವನ್ನು ಒಪ್ಪಿಸಿ ಕೊಡುವಂತಹ ಅರ್ಥವು ಸಹ ಪಾವತಿಬೇಕಾದಂತಹ ದೊಡ್ಡ ಮೌಲ್ಯವಾಗಿರುವುದಿಲ್ಲ.

## ಎಲ್ಲಾ ಅಡೆತಡೆಗಳಿಂದ ಹೊರಬರಲು ಸಮ್ಮತಿಸುವುದು

ಒಬ್ಬ ವ್ಯಕ್ತಿಯು ಬದ್ಧತೆಯಿಂದಿರುವವನು, ಆ ಒಂದು ಬದ್ಧತೆಯನ್ನು ಉಳಿಸಿಕೊಳ್ಳಲೂ ಎಲ್ಲಾ ರೀತಿಯ ಅಡೆತಡೆಗಳಿಂದ ಹೊರಬರಲೂ ಶಕ್ತನಾಗಿರುತ್ತಾನೆ. ಅವರು ಸುಲಭವಾಗಿ ಬಿಟ್ಟುಕೊಡುವುದಿಲ್ಲ ಮತ್ತು ಯಾವುದೇ ರೀತಿಯಲ್ಲಿ ಸುಲಭಕರವಾದ ಮಾರ್ಗವನ್ನು ನೋಡುವುದಿಲ್ಲ.

ಮಾಡಲ್ಪಟ್ಟಂತಹ ಬದ್ಧತೆಯನ್ನು ಉಳಿಸಿಕೊಳ್ಳಲು ಆ ವ್ಯಕ್ತಿಯು ಬಹಳ ದೃಢವಾಗಿರುತ್ತಾನೆ. ಯಾವುದೇ ಬಗೆಯ ಅಡೆತಡೆಗಳು ಬಂದರೂ ಸಹ ಅವರೂ ಅದಕ್ಕೆ ಒತ್ತಿಕೊಂಡಿರುತ್ತಾರೆ ಮತ್ತು ಬದ್ಧತೆಯನ್ನು ಇರಿಸಲು ಎಲ್ಲಾದರಿಂದ ಹೊರಬರಲೂ ಅತ್ಯಂತವಾದದ್ದನ್ನು ಮಾಡುತ್ತಾನೆ. ಹೀಗಿದ್ದರೂ, ಬದ್ಧತೆಯಿಲ್ಲದ ಒಬ್ಬ ವ್ಯಕ್ತಿಯು ಅವನಿಗೆ ವಿಷಯಗಳು ಅನುಕೂಲಕರವಾಗಿದ್ದರೆ ಮಾತ್ರ ಅವನು ಕಾರ್ಯ ಮಾಡಲು ವಾಗ್ದಾನ ಮಾಡುತ್ತಾನೆ. ಸಂಗತಿಗಳು ಕಠಿಣಗೊಳ್ಳುವಾಗ ಅವನು ಬದಲಾಯಿಸಲು ಬಯಸುತ್ತಾನೆ ಆದ್ದರಿಂದ ಭರವಸೆ ಕೊಟ್ಟಂತದ್ದನ್ನು ಅವನು ಮಾಡುವಂತಹ ಅವಶ್ಯಕತೆಯಿರುವುದಿಲ್ಲ.

## ಬದ್ಧತೆಯ ಮೇಲೆ ಕೇಂದ್ರೀಕರಣಗೊಳ್ಳುವುದರಲ್ಲಿ ಸಾಮರ್ಥ್ಯ

ಒಬ್ಬ ವ್ಯಕ್ತಿಯು ಬದ್ಧತೆಯುಳ್ಳವನಾಗಿದ್ದರೆ, ಅವನು ನೇರ ದೃಷ್ಟಿಯುಳ್ಳವನಾಗಿರಬೇಕು ಮತ್ತು ಸುಲಭವಾಗಿ ಹಿಂಜರಿಯುವುದಿಲ್ಲ. ಆದರೆ ಯಾವುದೇ ವಿಷಯಕ್ಕಾಗಿ ಬದ್ಧತೆಯಿಲ್ಲದವರಾಗಿರುವನು. ದಿಕ್ಸುಚಿಗೊಂಡು, ಅನುಕೂಲಕರವಾಗಿರುವ ಕಡೆಗೆ ಹೋಗುತ್ತಾನೆ.

ಲೂಕನು 9:57–62

**ಅವರು ದಾರಿಯಲ್ಲಿ ಹೋಗುತ್ತಿರುವಾಗ ಯಾವನೋ ಒಬ್ಬನು ಯೇಸುವಿಗೆ–ನೀನು ಎಲ್ಲಿಗೆ ಹೋದರೂ ನಾನು ನಿನ್ನ ಹಿಂದೆ ಬರುತ್ತೇನೆ ಎಂದು ಹೇಳಲು ಆತನು ಅವನಿಗೆ ನರಿಗಳಿಗೆ ಗುದ್ದುಗಳವೆ ಆಕಾಶದಲ್ಲಿ ಹಾರಾಡುವ ಹಕ್ಕಿಗಳಿಗೆ ಗೂಡುಗಳಿವೆ ಆದರೆ ಮನುಷ್ಯಕುಮಾರನಿಗೆ ತಲೆಯಿಡುವಷ್ಟು ಸ್ಥಳವೂ ಇಲ್ಲ ಎಂದು ಹೇಳಿದನು ಆತನು ಮತ್ತೊಬ್ಬನಿಗೆ ನನ್ನನ್ನು ಹಿಂಬಾಲಿಸು ಎಂದು ಹೇಳಲು ಅವನು ಸ್ವಾಮಿ, ನಾನು ಮೊದಲು ಹೋಗಿ ನನ್ನ ತಂದೆಯ ಉತ್ತರಕ್ರಿಯೆಗಳನ್ನು ಮಾಡಿ ಬರುವಂತೆ ನನಗೆ ಅಪ್ಪಣೆಯಾಗಬೇಕು ಅಂದನು ಆದರೆ ಆತನು ಅವನಿಗೆ ಸತ್ತವರೇ ತಮ್ಮವರಲ್ಲಿ ಸತ್ತು ಹೋದವರ ಉತ್ತರಕ್ರಿಯೆಗಳನ್ನು ಮಾಡಲಿ ನೀನಂತೂ ಹೋಗಿ ದೇವರ ರಾಜ್ಯವನ್ನು ಪ್ರಸಿದ್ಧಿಪಡಿಸು ಎಂದು ಹೇಳಿದನು. ಇನ್ನೊಬ್ಬನು ಸಹ ಸ್ವಾಮಿ ನಿನ್ನನ್ನು ಹಿಂಬಾಲಿಸುತ್ತೇನೆ ಆದರೆ ಮೊದಲು ನನ್ನ ಮನೆಯವರಿಗೆ ಹೇಳಿ ಬರುವುದಕ್ಕೆ ನನಗೆ ಅಪ್ಪಣೆಯಾಗಬೇಕು ಅರಿದನು ಯೇಸು ಅವನಿಗೆ–ಯಾವನಾದರೂ ನೇಗಿಲಿನ ಮೇಲೆ ತನ್ನ ಕೈಯನ್ನು ಹಾಕಿ ಹಿಂದಕ್ಕೆ ನೋಡಿದರೆ ಅವನು ದೇವರ ರಾಜ್ಯಕ್ಕೆ ತಕ್ಕವನಲ್ಲವೆಂದು ಹೇಳಿದನು.**

ಇಲ್ಲಿ ಯೇಸುವು ನಮ್ಮಿಂದ ಪಡೆಯಲು ಅಪೇಕ್ಷಿಸುತ್ತಿರುವಂತಹ ದೃಷ್ಟಿಯು, ''ಕರ್ತನೇ ನಾನು ನಿನ್ನನ್ನು ಹಿಂಬಾಲಿಸುತ್ತೇನೆ'' ಎಂಬುದಾಗಿ ತೀರ್ಮಾನ ಮಾಡಿದಾಗ ಮತ್ತು ನಾವು ಬದ್ಧತೆಯಿಂದಿರುವಾಗ ಅದರ ಕುರಿತು ಯಾವುದೇ ಎರಡು ಮಾರ್ಗಗಳಿಲ್ಲ ಎಂಬುದಾಗಿರುವುದಾಗಿದೆ. ಯೇಸುವಿನೊಂದಿಗಿನ ನಮ್ಮ ಬದ್ಧತೆಯು ನಾವು ಕೇಂದ್ರಿಕೃತಗೊಂಡಿರಲು ಪರಿಣಾಮ ಬೀರುತ್ತದೆ ಮತ್ತು ಎಲ್ಲಾ ಪ್ರಾಪಂಚಿಕ ಕಟ್ಟುಗಳನ್ನು ಸಡಿಲಗೊಳಿಸುತ್ತದೆ. ಆದಾಗ್ಯೂ ನಮ್ಮ ಕುಟುಂಬದ ಕುರಿತು ಅಥವಾ ಪ್ರಿಯಕರವಾದವರು ಕುರಿತು ಮರೆತುಬಿಡಿರಿ ಎಂಬುದಾಗಿ ಯೇಸುವು ಹೇಳುತ್ತಿಲ್ಲ ಬದ್ಧತೆಯುಳ್ಳ ವ್ಯಕ್ತಿಯು ಒಂದೇ ಗುರಿಯುಳ್ಳವನಾಗಿರುತ್ತಾನೆ ಎಂಬುದು ಮುಖ್ಯವಾಗಿದೆ. ಅವನು ಪ್ರಾಮುಖ್ಯವಾದ ಕುಟುಂಬದ ಜವಾಬ್ದಾರಿಗಳಿಂದಲೂ ಕದಲುವುದಿಲ್ಲ. ಕರ್ತನಾದ ಯೇಸುಕ್ರಿಸ್ತನನ್ನು ಹಿಂಬಾಲಿಸುವ ಕರೆಯಿಂದ ಇಂತಹವುಗಳು ಅವರನ್ನು ಕದಲಗೊಳಿಸುವುದಿಲ್ಲ.

# 3

# ಬದ್ಧತೆಯಿಂದಿರುವುದರ ಮೌಲ್ಯ

ಬದ್ಧತೆಯಿಂದಿರುವುದರ ಮೌಲ್ಯವೇನು? ಪ್ರತಿಯೊಬ್ಬರು ತಮಗೆ ಅನುಕೂಲಕರವಾದದ್ದನ್ನು ಮಾಡುತ್ತಿರುವಾಗ ನೀನು ಮತ್ತು ನಾನು ಏಕೆ ವಿಭಿನ್ನವಾಗಿದ್ದೇವೆ ಮತ್ತು ಬದ್ಧತೆಯ ಜನರಾಗಿ ಕಂಡುಬರುತ್ತೇವೆ? ಬದ್ಧತೆಯಿಂದಿರುವುದರಿಂದ ಆಗುವ ಲಾಭಗಳು ಯಾವುವು?

## ಸಾಮರ್ಥ್ಯ ಸ್ಥಿರತೆ ಮತ್ತು ನಿಶ್ಚಿತತೆ

ಬದ್ಧತೆಯಿಂದ ಇರುವುದರಿಂದ ನಾವು ಹಾದು ಹೋಗುತ್ತಿರುವಂತಹ ಬಹು ಕಠಿಣ ಸಮಯಗಳ ಅವಧಿಯಲ್ಲಿ ಅಳಿಸಲಾಗದಂತಹ ನಿಶ್ಚಿತತೆ ಮತ್ತು ಸ್ಥಿರತೆ, ಸಾಮರ್ಥ್ಯವನ್ನು ತರುತ್ತದೆ.

ಯಾಕೋಬನು 1:8
**ಅವನು ಎರಡು ಮನಸ್ಸುಳ್ಳವನೂ ತನ್ನ ನಡತೆಯಲ್ಲೆಲ್ಲಾ ಚಂಚಲನೂ ಆಗಿದ್ದಾನೆ.**

ನಂಬಿಕೆಯಲ್ಲಿ ಪ್ರಾರ್ಥಿಸುವುದು ಹೇಗೆ ಎಂಬ ಬೋಧನೆಯನ್ನು ನಮಗೆ ನೀಡಿದ ಬಳಿಕ, ಯಾಕೋಬನು ಎರಡು ಮನಸ್ಸುಳ್ಳ ಮನುಷ್ಯನ ಕುರಿತು ಒಂದು ಸಾಮಾನ್ಯವಾದ ವ್ಯಾಖ್ಯಾನಗಳಿಂದ ಅವನ ಬೋಧನೆಗಳನ್ನು ತಾತ್ಪರ್ಯಗೊಳಿಸುತ್ತಾನೆ. ಎರಡು ಮನಸುಳ್ಳ ಒಬ್ಬ ಮನುಷ್ಯನು ಅಸ್ಥಿರನಾಗಿರುತ್ತಾನೆ ಮತ್ತು ವಿಶ್ವಾಸಾರ್ಹವಲ್ಲದವರಾಗಿರುತ್ತಾರೆ. ಆದಾಗ್ಯೂ, ವ್ಯತಿರಿಕ್ತವಾಗಿರುವುದು ಸಹ ಸತ್ಯವಾಗಿದೆ. ಏಕ ಮನಸ್ಸುಳ್ಳ ಒಬ್ಬ ವ್ಯಕ್ತಿಯು–'ತನ್ನ ಮನಸ್ಸು ಸ್ಥಿರ ಮಾಡಿಕೊಂಡ' ಒಬ್ಬ ವ್ಯಕ್ತಿಯಾಗಿದ್ದಾನೆ, ಸ್ಥಿರತೆ ಮತ್ತು ಅಲುಗಾಡದಂತಹ ಬದ್ಧತೆಯುಳ್ಳ ಒಬ್ಬ ವ್ಯಕ್ತಿಯಾಗಿದ್ದಾನೆ.

## ಆಶೀರ್ವಾದಗಳು

ಬದ್ಧತೆಯನ್ನು ಹೊಂದಿರುವ ವ್ಯಕ್ತಿಯು ಲಾಭಗಳನ್ನು ಪಡೆದುಕೊಳ್ಳುತ್ತಾನೆ ಮತ್ತು ಆನಂದಿಸುತ್ತಾನೆ ಮತ್ತು ಆ ವ್ಯಕ್ತಿಯು ಏನಾಗಿಲ್ಲವೋ ಅದಕ್ಕಿಂತ ವಿಸ್ತಾರವಾದ ಒಂದು ಮಹತ್ತರವಾದ ಆಶೀರ್ವಾದಗಳನ್ನು ಹೊಂದುತ್ತಾನೆ.

ಜ್ಞಾನೋಕ್ತಿಗಳು 28:20
**ನಂಬಿಗಸ್ತನು ಆಶೀರ್ವಾದ ಪೂರ್ಣನಾಗುವನು.**

ನಂಬಿಗಸ್ತನು ಬದ್ಧತೆಯಿಂದಿರುವವನಾಗಿದ್ದಾನೆ. ಅವನ ಸಂಪೂರ್ಣ ಹೃದಯದ ಬದ್ಧತೆಯು ಅವನನ್ನು ನಂಬಿಗಸ್ತನಾಗಿ ಮಾಡುತ್ತದೆ. ಯಾವುದಾದರೊಂದನ್ನು ಅರ್ಧ ಹೃದಯದಿಂದ ಮಾಡುವಂತಹ ವ್ಯಕ್ತಿಯು, ಸಂಪೂರ್ಣ ಹೃದಯದಿಂದ ಅದನ್ನು ಮಾಡುವಂತಹ ವ್ಯಕ್ತಿಯು ಅನುಭವಿಸುವಂತ ಆನಂದವನ್ನು ಅನುಭವಿಸುವುದಿಲ್ಲ. ಸಂಪೂರ್ಣ ಹೃದಯದಿಂದ ಕಾರ್ಯ ಮಾಡುವಂತಹ ವ್ಯಕ್ತಿಯು ಉತ್ತಮವಾದ ಕೆಲಸವನ್ನು ನಿಶ್ಚಯವಾಗಿ ಮಾಡುತ್ತಾನೆಂಬುದು ಸಂದೇಹವಿಲ್ಲದಾಗಿರುತ್ತದೆ ಮತ್ತು ಹೀಗಾಗಿ ಒಂದು ಮಹತ್ತಾದ ಬಹುಮಾನ ಹೊಂದುತ್ತಾನೆ.

ಸ್ವಾಭಾವಿಕ ದೇಹದ ಕುರಿತು ಆಲೋಚಿಸಿರಿ, ಒಂದೇ ಘಟಕವಾಗಿ ಕಾರ್ಯ ಮಾಡುವ ಕ್ರಮದಲ್ಲಿ ದೇಹದ ಅಂಗಗಳು ಒಟ್ಟಾಗಿ ಇರಬೇಕೇಂಬುದಾಗಿ ದೇವರು ಉದ್ಧೇಶಿಸಿದ್ದಾನೆ. ಇಂದಿನ ದಿನಮಾನಗಳಲ್ಲಿ ನಿಮ್ಮ ಕೈ ನಿಮ್ಮ ದೇಹಕ್ಕೆ ಅಂಟಿಕೊಂಡಿರುವುದನ್ನು ನೀವು ನೋಡುವುದಿಲ್ಲ ಮತ್ತು ನಾಳೇ ಬೇರೆಯವರ ದೇಹದ ಅಂಗವಾಗಿ ಕಂಡು ಬರುತ್ತದೆ ಮತ್ತು ಸುತ್ತಲೂ ತೇಲುವಂತದ್ದಾಗಿರುತ್ತದೆ. ಅದೂ ಅಲ್ಲದೇ ಇಂದು ನಿಮ್ಮ ದೇಹದಲ್ಲಿ ನಿಮ್ಮ ಹೃದಯವು ಬಡಿಯುತ್ತಿದ್ದರೆ ಆಮೇಲೆ ನಾಳೇ ಮತ್ತೊಬ್ಬನ ದೇಹದಲ್ಲಿ ಹೃದಯ ಬಡಿಯುವಂತದ್ದಾಗಿರುತ್ತದೆ. ನಮ್ಮ ದೇಹದ ಭಾಗಗಳು ಸಂಪರ್ಕ ರಹಿತವಾಗಿ ದೇವರು ರಚಿಸಿದ್ದರೆ ಮತ್ತು ಸ್ವತಂತ್ರವಾಗಿ ಕೆಲಸ ಮಾಡುತ್ತಿದ್ದರೆ ಆಮೇಲೆ ಸುತ್ತಲೂ ತೇಲಾಡುವಂತಹ, ಹೃದಯಗಳು, ಕೈಗಳು, ಕಣ್ಣುಗಳು, ಶ್ವಾಸಕೋಶಗಳು, ದೇಹದ ಅಂಗಗಳನ್ನು ಹೊಂದಿರುತ್ತಿದ್ದೇವು. ಇಂತಹ ಕೆಲವು ಭಾಗಗಳು ಯಾವುದಾದರೊಂದನ್ನು ಮಾಡಲೂ ಒಟ್ಟಾಗಿ ಸೇರಿ ಬರುತ್ತವೆ ಮತ್ತು ತಿರುಗಿ ಚದುರಿ ಹೋಗುತ್ತವೆ. ಇದು ಬಹಳ ಹಾಸ್ಯಾಸ್ಪದವಾಗಿ ಕಾಣುತ್ತದೆ ಮತ್ತು ಈ ರೀತಿಯಾಗಿ ಕಾರ್ಯ ಮಾಡಲೂ ನಮ್ಮ ಸ್ವಭಾವಿಕ ದೇಹಗಳು ಮಾಡಲ್ಪಡದೇ ಇರುವುದಕ್ಕೆ ನಾವು ದೇವರಿಗೆ ವಂದನೇ ಹೇಳುತ್ತೇವೆ. ವೈದ್ಯಕೀಯ ವಿಜ್ಞಾನವು ನಿರ್ದಿಷ್ಟ ದೇಹದ ಭಾಗಗಳ ಕಸಿ ಮಾಡುವಂತದ್ದನ್ನು ಸಾಧ್ಯಕರವಾಗಿಸಿದ್ದಾಗಲೂ ನಿಮ್ಮ ದೇಹದ ಪ್ರತಿಯೊಂದು ಅಂಗವು ನಿಮ್ಮ ದೇಹಕ್ಕೆ ''ಬದ್ಧತೆಯಿಂದಿರುತ್ತದೆ'' ಮತ್ತು ಉಳಿದ ನಿಮ್ಮ ಅಂಗಕ್ಕೆ ಸೇರಿಕೊಂಡಾಗ ಉತ್ತಮವಾಗಿ ಕೆಲಸ ಮಾಡುತ್ತವೆ ಎಂಬುದು ಸಾಮಾನ್ಯವಾದ ನಿಯಮವಾಗಿದೆ. ಒಟ್ಟಾಗಿ ನಿಮ್ಮ ದೇಹವು ಅತ್ಯಧಿಕವಾದದ್ದನ್ನು ಸಾಧಿಸಲು ಮತ್ತು ಅಧಿಕವಾದದ್ದನ್ನು ನಿರ್ವಹಿಸಲು ಶಕ್ತವಾಗುತ್ತದೆ. ನಮ್ಮ ಸ್ವಾಭಾವಿಕ ದೇಹವು, ಕ್ರಿಸ್ತನ ಸಂಪೂರ್ಣ ಅಂಗದ ಭಾಗವಾಗಿರುವ ಸ್ಥಳೀಯ ಸಭೆಯ ಕುರಿತು ನಮಗೆ ಒಂದು

'ಸಂದೇಶ' ಹೊಂದಿದೆ. ನಾವು ಸ್ಥಳೀಯ ಸಭೆಯ ಕುರಿತು ಆಲೋಚಿಸಿದಾಗ, ಜನರು ಸಭೆಯಿಂದ ಸಭೆಗೆ ಸುತ್ತಲೂ ಕುಪ್ಪಳಿಸುವುದನ್ನು ನೋಡುವಂತದ್ದು ಸಾಮಾನ್ಯವಾಗಿದೆ. ಕ್ರಿಸ್ತೀಯ ಜೀವಿತವನ್ನು ಆತನ ಜನರು ಜೀವಿಸಲೂ ದೇವರು ಉದ್ದೇಶಿಸಿದ ಮಾರ್ಗ ಇದಲ್ಲ. ಅವನು/ಆಕೆಯು ಎಲ್ಲಿರಬೇಕೆಂಬುದಾಗಿ ದೇವರು ಕರೆದಂತಹ ಅವನು/ಆಕೆಯು ನಂಬಿಕೆಯಿಡುವ ಒಂದು ಸ್ಥಳೀಯ ಸಭೆಗೆ ಪ್ರತಿಯೊಬ್ಬ ವಿಶ್ವಾಸಿಯು ಬದ್ಧತೆಯಿಂದಿರಬೇಕು. ದೇವರು ನಮ್ಮನ್ನು ಇರಿಸಿದಂತಹ ಸ್ಥಳೀಯ ವಿಶ್ವಾಸಿಗಳ ದೇಹದಲ್ಲಿ ನಾವು ಬದ್ಧತೆಯಿಂದಿರಬೇಕು. ಸ್ಥಳೀಯ ದೇಹಕ್ಕೆ ನಂಬಿಗಸ್ತರಾಗಿ ಇರುವಾಗ ಮಾತ್ರ ದೇಹದ ಅಂಗವಾಗಿರುವುದರ ಸಂಪೂರ್ಣ ಆಶೀರ್ವಾದ ಪಡೆದುಕೊಳ್ಳಬಹುದು. ಅನೇಕ ಕಡೆಗಳಿಗೆ ಕುಪ್ಪಳಿಸುವಂತಹವರು ಅಧಿಕವಾದದ್ದನ್ನು ಹೊಂದುವುದಿಲ್ಲ ಸಂಗತಿಗಳನ್ನು ಜರುಗುವಂತೆ ಮಾಡುವುದರಲ್ಲಿ ಅವರು ಸಹಾಯಕರಾಗಿರುವುದಿಲ್ಲ.

ನಾವು ಬದ್ಧತೆಯಿಂದಿರುವಾಗ ಮಾತ್ರವೇ, ದೀರ್ಘಾವಧಿಯ ಲಾಭಗಳು ಮತ್ತು ಆಶೀರ್ವಾದಗಳನ್ನು ಪಡೆಯಲು ಸಾಧ್ಯ. ನಮ್ಮಲ್ಲಿ ಅನೇಕರಿಗೆ ಬರೀ ''ಭಾನುವಾರದ ಬೆಳ್ಳಿಗೆಯ ಮನರಂಜನೆ'' ಮಾತ್ರ ಬೇಕಾಗಿದೆ ಮತ್ತು ಸುತ್ತಾಡುತ್ತಿರುತ್ತೇವೆ. ನಾವು ಕೇಳಲೂ ಬಯಸುವಂತಹ ಸಂದೇಶ ಪ್ರಸಂಗಿಸುವ ಸಭಾಪಾಲಕರು ಕರ್ತನ ವಾಕ್ಯವನ್ನು ಪ್ರಸಂಗಿಸಿದರೆ-ಆಗಾಗ್ಗೆ ನಾವು ಕೇಳಲು ಬಯಸುವುದರಿಂದ ಏನಾದರೊಂದು ವಿಭಿನ್ನವಾಗಿ ಪ್ರಸಂಗಿಸಿದರೆ-ನಮ್ಮ ಬದ್ಧತೆಯು ಮತ್ತು ಕಿಟಕಿಯಿಂದ ಹೊರಗೆ ತೇಲಾಡುತ್ತದೆ ಮತ್ತು ನಾವು ಬಾಗಿಲಿನಿಂದ ಹೊರಗೆ ನಡೆಯುತ್ತೇವೆ. ನಾವು ದೀರ್ಘಾವಧಿಯ ಆಶೀರ್ವಾದಗಳು ಮತ್ತು ಲಾಭಗಳನ್ನು ಹೊಂದಬೇಕಾದರೆ ನಾವು ಒಂದು ಸ್ಥಳೀಯ ಸಭೆಯ ಅಂಗ, ಸೇವೆ ಮತ್ತು ಅಲ್ಲಿನ ಕಾರ್ಯಗಳಿಗೆ ಬದ್ಧತೆಯಿಂದಿರಬೇಕು.

## ಬಹುಮಾನಗಳು

ಇಬ್ರಿಯರಿಗೆ 11:6

**ತನ್ನನ್ನು ಹುಡುಕುವವರಿಗೆ ಪ್ರತಿಫಲವನ್ನು ಕೊಡುತ್ತಾನೆ ಎಂದು ನಂಬುವುದು ಅವಶ್ಯ.**

ನಾವು ಪರಿಶ್ರಮದಿಂದ ಆತನನ್ನು ಹುಡುಕಬೇಕು. ದೇವರನ್ನು ಹುಡುಕಲು ಒಂದು ಬದ್ಧತೆಯು ಇದೆ. ನೀವು ದೇವರನ್ನು ಹುಡುಕಲು ಬದ್ಧತೆಯಿಂದ ಇದ್ದೀರಾ ಅಥವಾ ನಮಗೆ ಬಿಡುವಿನ ಸಮಯ ಇರುವಾಗ ಮಾತ್ರ ದೇವರನ್ನು ಹುಡುಕುತ್ತೇವಾ? ನಾವು ದೇವರ ವಾಕ್ಯವನ್ನು ಅಧ್ಯಯನ ಮಾಡುವುದು ಮತ್ತು ಪ್ರಾರ್ಥನೆಯಲ್ಲಿ ಸಮಯ ಕಳೆಯಲೂ ಬದ್ಧತೆಯಿಂದ ಇದ್ದೇವಾ ಅಥವಾ ಸಮಯವು ಅನುಮತಿಸಿದರೆ ಮಾತ್ರ, ನಾವು ದೇವರನ್ನು ಹುಡುಕುತ್ತೇವಾ ಅನೂಕೂಲಕರವಾಗಿರುವಾಗ

ಹುಡುಕುವುದಲ್ಲದೆ ಆತನನ್ನು ಪರಿಶ್ರಮದಿಂದ ಹುಡುಕುವವರಿಗೆ ದೇವರು ಬಹುಮಾನ ನೀಡುತ್ತಾನೆ ಎಂಬುದಾಗಿ ಸತ್ಯವೇದ ಹೇಳುತ್ತದೆ. ಬದ್ಧತೆಯುಳ್ಳ ವ್ಯಕ್ತಿಯು ಅವನ ಜೀವಿತದ ಮೇಲೆ ದೇವರ ಬಹುಮಾನಗಳನ್ನು ಅನುಭವಿಸುತ್ತಾನೆ.

## ಪ್ರಗತಿ

1 ತಿಮೊಥೆಯನಿಗೆ 4:15

**ಈ ಕಾರ್ಯಗಳನ್ನು ಸಾಧಿಸಿಕೊಳ್ಳುವುದರಲ್ಲಿ ಆಸಕ್ತನಾಗಿರು ಇದರಿಂದ ನಿನ್ನ ಅಭಿವೃದ್ಧಿಯು ಎಲ್ಲರಿಗೂ ಪ್ರಸಿದ್ಧವಾಗುವುದು.**

ಬದ್ಧತೆಯುಳ್ಳ ವ್ಯಕ್ತಿಯು ಪ್ರಗತಿಯನ್ನು ಹೊಂದುವ ವ್ಯಕ್ತಿಯಾಗಿದ್ದಾನೆ. ಪೌಲನು ಯೌವನಸ್ಥನಾದ ತಿಮೊಥೆಯನಿಗೆ ಒಬ್ಬ ದೇವರ ಸೇವಕನು ಹೇಗಿರಬೇಕೆಂಬುದರ ಕುರಿತು ಸಲಹೆ ನೀಡುತ್ತಾನೆ. ಇಂತಹ ಉಪದೇಶಗಳನ್ನು ಅರ್ಧ-ಹೃದಯದಿಂದ ಅಥವಾ ಅನುಕೂಲಕರವಾಗಿರುವಾಗ ಮಾತ್ರ ಹಿಂಬಾಲಿಸದೇ, ಅವನು ಉಪದೇಶ ಹೊಂದಿದ್ದಂತಹವುಗಳಿಗೆ ತನ್ನನ್ನು ಸಂಪೂರ್ಣವಾಗಿ ಒಪ್ಪಿಸಿಕೊಡಬೇಕೆಂಬುದಾಗಿ ಪೌಲನು ಹೇಳುತ್ತಾನೆ. ಅವುಗಳನ್ನು ಮಾಡುವಾಗ ಪ್ರಗತಿ, ಪ್ರೌಢತೆ, ಬೆಳವಣಿಗೆ ಮತ್ತು ಅಭಿವೃದ್ಧಿಯು ಎಲ್ಲದಕ್ಕೂ ಪುರಾವೆಯಾಗಿ ಕಂಡುಬರುತ್ತದೆ.

ನಮ್ಮ ಜೀವಿತಗಳಿಗೂ ಸಹ ಅದೇ ತತ್ವಗಳನ್ನು ಅನ್ವಯಿಸಿಕೊಳ್ಳಬೇಕು, ನಾವು ಒಬ್ಬ ದೇವರ ಸೇವಕನಾಗಿರಲು ಬದ್ಧತೆಯಿಂದಿರಬೇಕು, ಸುಗ್ಗಿಯನ್ನು ಕುಯ್ಯಲೂ ಬದ್ಧತೆಯಿಂದಿರಬೇಕು, ಇತರ ವಿಶ್ವಾಸಿಗಳಿಗೆ ಮಾದರಿಯಾಗಿರಲೂ ಬದ್ಧತೆಯುಳ್ಳವರಾಗಿದ್ದೇವೆ ಮತ್ತು ಸಭೆಯನ್ನು ಮುನ್ನಡೆಸುವಂತಹ ಜವಾಬ್ದಾರಿಗೆ ಬದ್ಧತೆಯುಳ್ಳವರಾಗಿದ್ದೇವೆ. ನಾವು ಬದ್ಧತೆಯಿಂದಿರುವಾಗ ನಮ್ಮ ಪ್ರಗತಿಯು ಸ್ಪಷ್ಟವಾಗಿರುತ್ತದೆ. ಅರ್ಧ ಹೃದಯದಿಂದ ವಿಷಯಗಳನ್ನು ಮಾಡುವಂತಹ ವ್ಯಕ್ತಿಯು ನಿಂತು ನಾರುವನಾಗಿರುತ್ತಾನೆ. ನಮಗಿಂತ ಮೊದಲೂ ನಮ್ಮ ಪ್ರಾಣ, ಆತ್ಮ, ಶರೀರಗಳನ್ನು ಸಂಪೂರ್ಣವಾಗಿ ನಾವು ಕೊಡುವಾಗ ಮಾತ್ರವೇ ನಾವು ಪ್ರಗತಿ ಹೊಂದುತ್ತೇವೆ ಮತ್ತು ಜನರು ಅದನ್ನು ನೋಡುತ್ತಾರೆ.

ಬದ್ಧತೆಯಿಂದಿರುವುದರ ಲಾಭಗಳು

- ಸಾಮರ್ಥ್ಯ, ಸ್ಥಿರತೆ ಮತ್ತು ನಿಶ್ಚಿತತೆ
- ಆಶೀರ್ವಾದಗಳು
- ಬಹುಮಾನಗಳು
- ಪ್ರಗತಿ

# 4

# ನೀವು ಬದ್ಧತೆಯುಳ್ಳವರಾಗಿದ್ದೀರಾ?

ಯಾರಾದರೂ ನಮ್ಮ ಬದ್ಧತೆಯ ಕುರಿತು ಪ್ರಶ್ನಿಸಿದರೇ-ನಾವು ಅತೀಬೇಗನೆ ನಾವು ಬದ್ಧತೆಯುಳ್ಳವಾಗಿದ್ದೇವೆ ಎಂಬುದಾಗಿ ಉತ್ತರಿಸುತ್ತೇವೆ. ಇಂತಹ ಪ್ರಶ್ನೆಗಳಿಗಿನ ಉತ್ತರಗಳು ನಮ್ಮ ಬದ್ಧತೆಯ ವಿಸ್ತಾರದ ಮೇಲೆ ಅಧಿಕವಾದ ಬೆಳಕನ್ನು ಬೀರುತ್ತವೆ.

- ನಾವು ಬದ್ಧತೆಯ ಜನರಾಗಿದ್ದೇವಾ ಅಥವಾ ಅನುಕೂಲಕರವಾಗಿ ನಾವು ಜೀವಿಸುತ್ತಿದ್ದೇವಾ?
- ಸರಿಯಾದುದ್ದನ್ನು ಮಾಡಲೂ ನಾವು ಬದ್ಧತೆಯುಳ್ಳವರಾಗಿದ್ದವ್ಡೋ? ಎಲ್ಲಾ ಪರಿಸ್ಥಿತಿಯಲ್ಲಿ, ಎಲ್ಲಾ ಕಡೆಗಳಲ್ಲಿಯೂ, ಎಲ್ಲಾ ಸಮಯದಲ್ಲಿಯೂ ಸರಿಯಾದುದ್ದನ್ನು ಮಾಡುವ ನೀತಿವಂತಿಕೆಗೆ ನಾವು ಬದ್ಧತೆಯುಳ್ಳವರಾಗಿದ್ದೇವಾ ಅಥವಾ ನಾವು ರಾಜಿ ಮಾಡಿಕೊಂಡವರಾಗಿ ಮತ್ತು ನಮ್ಮ ಅನುಕೂಲಗಳಿಗೆ ಅನುಸಾರವಾಗಿ ಬದಲಾವಣೆಗೆ ನಾವು ನಿಂತಿದ್ದೇವಾ?
- ಕರ್ತನಾದ ಯೇಸುಕ್ರಿಸ್ತನಿಗೆ, ನಮ್ಮ ಸ್ಥಳೀಯ ಸಭೆಗೆ ಮತ್ತು ಕ್ರಿಸ್ತನ ಅಂಗಕ್ಕೆ ನಾವು ಬದ್ಧತೆಯುಳ್ಳವರಾಗಿದ್ದೇವಾ?
- ನಮ್ಮ ಸಂಗಾತಿ, ಮದುವೆ ಮತ್ತು ಕುಟುಂಬಕ್ಕೆ ನಾವು ಬದ್ಧತೆಯುಳ್ಳವರಾಗಿದ್ದೇವಾ? ಜೀವಿತದ ''ಏಳುಗಳು'' ಮತ್ತು ''ಬೀಳುಗಳು'' ಮೂಲಕವಾಗಿಯು ನಾವು ನಮ್ಮ ಸಂಗಾತಿಯನ್ನು ಪ್ರೀತಿಸುತ್ತೇವಾ?
- ನಾವು ಮಾಡುವಂತಹ ಭರವಸೆಗಳಿಗೆ ಬದ್ಧತೆಯುಳ್ಳವರಾಗಿರುತ್ತೇವಾ?
- ನಮ್ಮ ಕೆಲಸದ ಸ್ಥಳ, ನಮ್ಮ ಯಜಮಾನ, ನಮ್ಮ ಜೊತೆ ಕೆಲಸದವರು ಮತ್ತು ನಮ್ಮ ಸ್ನೇಹಿತರುಗಳಿಗೆ ನಾವು ಬದ್ಧತೆಯುಳ್ಳವರಾಗಿದ್ದೇವಾ?
- ದೇವರೊಂದಿಗೆ ಸಮಯಕಳೆಯಲೂ ನಾವು ಬದ್ಧತೆಯುಳ್ಳವರಾಗಿದ್ದೇವಾ?

ಕರ್ತನಾದ ಯೇಸುಕ್ರಿಸ್ತನಿಗೆ ನಮ್ಮ ಬದ್ಧತೆಯು ಹೇಗೆ ಆಳವಾಗಿದೆ? ''ನನ್ನ ಹೆಸರಿನ ನಿಮ್ಮಿತ್ತ ನಿಮ್ಮನ್ನು ಎಲ್ಲರೂ ಹಗೆ ಮಾಡುವರು. ಆದರೆ ಕಡೇವರೆಗೂ

ತಾಳುವವನು ರಕ್ಷಣೆ ಹೊಂದುವನು'' (ಮತ್ತಾಯ 10:22) ಎಂಬುದಾಗಿ ಕರ್ತನಾದ ಯೇಸುವು ಹೇಳಿದ್ದಾನೆ. ಎಲ್ಲವೂ ಅನುಕೂಲಕರವಾಗಿರುವಾಗ ಮತ್ತು ಸುಲಭವಾಗಿರುವಾಗ ಮಾತ್ರವೇ ಯೇಸುಕ್ರಿಸ್ತನಿಗೆ ನಾವು ಬದ್ಧತೆಯುಳ್ಳವರಾಗಿದ್ದೇವಾ ಮತ್ತು ಜನರು ನಮ್ಮನ್ನು ದ್ವೇಷಿಸುವಾಗಲೂ ಕೊನೆಯವರೆಗೂ ಆತನನ್ನು ಹಿಂಬಾಲಿಸಲೂ ನಾವು ಬದ್ಧತೆಯುಳ್ಳವರಾಗಿದ್ದೇವಾ? ಯೇಸುಕ್ರಿಸ್ತನಿಗೆ ಇರುವ ನಮ್ಮ ಬದ್ಧತೆಯ ಆಳವೆಷ್ಟು?

ನಮ್ಮ ಸ್ಥಳೀಯ ಸಭೆಗೆ ನಮ್ಮ ಬದ್ಧತೆಯೇನು? ಉತ್ತಮವಾದ ಸಂಗೀತ, ಉತ್ತಮ ಸಂದೇಶಗಳು ಮತ್ತು ಎಲ್ಲವೂ ಶಾಂತವಾಗಿ ಕಾಣುವಂತಹ ಮತ್ತು ಸುಲಭವಾಗಿ ಎಲ್ಲವೂ ಸುಗಮವಾಗಿ ಹೋಗುವಂತಹ ನಮ್ಮ ಸ್ಥಳೀಯ ಸಭೆಗೆ ಮಾತ್ರವೇ ನಾವು ಬದ್ಧತೆಯಿಂದ ಇದ್ದೇವಾ ಅಥವಾ ಕೆಲವು ಬಿರುಗಾಳಿಯ ಪರಿಸರದ ಮೂಲಕವಾಗಿ ಸಭೆಯು ಹಾದು ಹೋಗುವಾಗ ಇನ್ನೂ ನಾವು ಬದ್ಧತೆಯಿಂದ ಇದ್ದೇವಾ? ನಾವು ಆ ಸಭೆಯ ಸುತ್ತಲೂ ಇದ್ದೇವಾ ಅಥವಾ ನಾವು ಮತ್ತೊಂದು ಸಭೆಯನ್ನು ನೋಡುತ್ತೇವಾ?

ಆಲ್ ಪೀಪಲ್ಸ್ ಸಭೆಯಲ್ಲಿ ನಾವು ಹೊರಗಡೆ ಹೋಗಲೂ ಮತ್ತು ಯೇಸುಕ್ರಿಸ್ತನ ಸುವಾರ್ತೆಯನ್ನು ಸಾರಲೂ ನಾವು ಬದ್ಧತೆಯಿಂದ ಇದ್ದೇವೆ. ನಾವು ಯೇಸುವಿನ ಕುರಿತು ಸಾರಲೂ ಹೊರಗೆ ನಾವು ಹೋಗುವಾಗ, ನಾವು ಅನಿವಾರ್ಯವಾಗಿ ಗಮನವನ್ನು ಆಕರ್ಷಿಸಲು ಹೋಗುತ್ತೇವೆ. ನಾವು ಹಿಂಸೆಯನ್ನು ಅನುಭವಿಸಬಹುದು ಸ್ಥಳೀಯ ಸಭೆಯಲ್ಲಿ ಹಿಂಸೆಯುಂಟಾಗುವಾಗ ನಾವು ಆ ಸಭೆಯಲ್ಲೇ ಇರುತ್ತೇವಾ ಅಥವಾ ನಾವು ಬೇರೆ ಎಲ್ಲಿಗಾದರೂ ಹೋಗುತ್ತೇವಾ? ''ಕರ್ತನೆ, ನಾನು ಈ ಅಂಗದ ಭಾಗವಾಗಿದ್ದೇನೆ ಎಂಬುದಾಗಿ ನಾನು ನಂಬುತ್ತೇನೆ ಮತ್ತು ಅಂಗವು ಹಿಂಸೆಗೊಳಗಾದರೆ, ನಾನು ಬದ್ಧತೆಯಿಂದ ಇರುತ್ತೇನೆ ಮತ್ತು ನಮ್ಮ ಮಾರ್ಗಕ್ಕೆ ಬರುವಂತಹ ಎಲ್ಲವನ್ನೂ ಎದುರಿಸುತ್ತೇನೆ? ಎಂಬುದಾಗಿ ನಾವು ಹೇಳುತ್ತೇವಾ?

ಎಲ್ಲವೂ ಉತ್ತಮವಾಗಿ ಮತ್ತು ಸುಲಭವಾಗಿ, ಹಿಂಸೆಯನ್ನು ಎಂದಿಗೂ ಪಡೆದಿರುವಂತಹ ಸ್ಥಳೀಯ ಅಂಗವನ್ನು ನೀವು ಹುಡುಕುತ್ತಿದ್ದರೆ, ಆಲ್‌ಪೀಪಲ್ಸ್ ಸಭೆಯು ನಿಮಗಾಗಿ ಇರುವಂತಹ ಸ್ಥಳವಾಗಿರುವುದಿಲ್ಲ. ಯೇಸುವಿನ ಕುರಿತು ನಾಚಿಕೆಯಿಲ್ಲದೆ ಘೋಷಿಸುವಂತಹ ಮತ್ತು ಅದನ್ನು ಮಾಡುವಂತದ್ದರಲ್ಲಿ ಹಿಂಸೆಯನ್ನು ಅನುಭವಿಸುವಂತಹ ಒಂದು ಅಂಗವನ್ನು ಎದುರು ನೋಡುತ್ತಿದ್ದರೆ ಮತ್ತು ಯೇಸು

ಕ್ರಿಸ್ತನ ಹೆಸರಿನ ನಿಮಿತ್ತದಿಂದ ಕೆಲವು ಕಠಿಣ ಪರಿಸ್ಥಿತಿಗಳನ್ನು ಅನುಭವಿಸಲೂ ನೀವು ಸಿದ್ಧರಾಗಿ ಒಂದು ಅಂಗವನ್ನು ಹುಡುಕುತ್ತಿದ್ದರೆ ನೀವು ಆಲ್‌ಪೀಪಲ್ಸ್ ಸಭೆಗೆ ಬರಬಹುದೆಂಬುದಾಗಿ ಸ್ವಾಗತಿಸುತ್ತೇವೆ!

ಜನರನ್ನು ಕತ್ತಲೆಯಿಂದ ಅದ್ಭುತವಾದ ಬೆಳಕಿಗೆ ತರಬೇಕೆಂಬುದಾಗಿ, ಹೊರಟು ಹೋಗಿ, ಸುವಾರ್ತೆ ಸಾರಬೇಕೆಂಬುದಾಗಿ ದೇವರು ನಮಗೆ ಆದೇಶಾಧಿಕಾರ ನೀಡಿದ್ದಾನೆ. ನಾವು ಇದನ್ನು ಮಾಡಲೂ ಹೋಗುವಾಗ ದುರಾತ್ಮನು ಸುಮ್ಮನಿರುವುದಿಲ್ಲ. ಆದಾಗ್ಯೂ ಸ್ಥಳೀಯ ಅಂಗದ ಭಾಗವಾಗಿರುವುದರಿಂದ, ಹಿಂಸೆಯನ್ನು ತಾಳಿಕೊಳ್ಳಲೂ ತಾಳ್ಮೆಯಿಂದಿರಬೇಕು ಮತ್ತು ಬಲಿಷ್ಟರಾಗಿ ಹೊರಬರಬೇಕು. ಅದು ನಮ್ಮ ಬದ್ಧತೆಯಾಗಿರಬೇಕು. ಅಂಗವಾಗಿ ದೇವರ ನಮಗೆ ಕೊಡಲ್ಪಟ್ಟ ದರ್ಶನಕ್ಕೆ ನಾವು ಬದ್ಧತೆಯಿಂದಿರಬೇಕು.

ನಮ್ಮ ಸ್ಥಳೀಯ ಅಂಗದ ಇತರೆ ಸದಸ್ಯರುಗಳಿಗೆ ಬದ್ಧತೆಯಿಂದ ಇದ್ದೇವಾ? ನಾವು ಒಬ್ಬರಿಗೊಬ್ಬರು ಕಾಳಜಿ ವಹಿಸುತ್ತೇವಾ? ನಾವು ಒಬ್ಬರಿಗೊಬ್ಬರು ಪ್ರೀತಿಸುವವರಾಗಿದ್ದೇವಾ?

ನಮ್ಮ ನಗರದಲ್ಲಿನ ಕ್ರಿಸ್ತನ ಅಂಗಕ್ಕೆ ನಾವು ಬದ್ಧತೆಯಾಗಿರುತ್ತೇವಾ? ನಮ್ಮ ನಗರದಲ್ಲಿನ ಸಭೆಗಳಿಗೆ ಮತ್ತು ದೇವರು ಎಬ್ಬಿಸಿದಂತಹ ಸಭಾಪಾಲಕರು/ಸೇವಕರುಗಳಿಗೆ ನಾವು ಬದ್ಧತೆಯುಳ್ಳವರಾಗಿದ್ದರೆ, ಆಮೇಲೆ ನಾವು ಅವರನ್ನು ಕೆಟ್ಟಬಾಯಿಂದ ಮಾತಾಡುವುದರಲ್ಲಿ ಹಿಂದೇಟು ಹಾಕಬೇಕು. ನಾವು ಯಾವಾಗಲೂ ಅವರ ಒಳಿತನ್ನು ಮತ್ತು ಉತ್ತಮವಾಗಿರುವುದನ್ನು ಹುಡುಕಬೇಕು. ಕೆಲವರು ಬಿದ್ದು ಹೋದರೆ, ತಪ್ಪುಗಳನ್ನು ಮಾಡಿದರೆ ಮತ್ತು ಮುಗ್ಗರಿಸಿದರೆ ಅವರನ್ನು ಕೆಳಗೆ ಹಾಕದೇ ಅವರಿಗಾಗಿ ನಾವು ಪ್ರಾರ್ಥಿಸುತ್ತೇವೆ.

ನಮ್ಮ ಜೀವಿತಕ್ಕಿರುವ ದೇವರ ಕರೆ, ದರ್ಶನಗಳು ಮತ್ತು ಕನಸ್ಸುಗಳಿಗೆ ನಾವು ಬದ್ಧತೆಯುಳ್ಳವರಾಗಿದ್ದೇವಾ? ''ಆದದರಿಂದ ನನ್ನ ಪ್ರಿಯ ಸಹೋದರರೇ, ಸ್ಥಿರ ಚಿತ್ತರಾಗಿಯೂ ನಿಶ್ಚಲರಾಗಿಯೂ ಇರ್ರಿ. ನೀವು ಕರ್ತನ ಸೇವೆಯಲ್ಲಿ ಪಡುವ ಪ್ರಯಾಸವು ನಿಷ್ಫಲವಾಗುವುದಿಲ್ಲವೆಂದು ತಿಳಿದು ಕರ್ತನ ಕೆಲಸವನ್ನು ಯಾವಾಗಲೂ ಅತ್ಯಾಸಕ್ತಿಯಿಂದ ಮಾಡುವವರಾಗಿರಿ'' (1 ಕೊರಿಂಥದವರಿಗೆ 15:58) ಕರ್ತನಲ್ಲಿ ನಿಮ್ಮ ಕೆಲಸವು ವ್ಯರ್ಥವಾಗುವುದಿಲ್ಲವೆಂದು ತಿಳಿದು ಕರ್ತನಿಗಾಗಿ ಕೆಲಸ ಮಾಡಲೂ ಯಾವಾಗಲೂ ನಾವು ಬದ್ಧತೆಯುಳ್ಳವರಾಗಿದ್ದೇವೆ.

ಪ್ರಕಟನೆ 3:15,16
**ನಿನ್ನ ಕೃತ್ಯಗಳನ್ನು ಬಲ್ಲೆನು ನೀನು ತಣ್ಣಗೂ ಅಲ್ಲ ಬೆಚ್ಚಗೂ ಅಲ್ಲ ನೀನು ತಣ್ಣಗಾಗಲಿ ಇದ್ದರೆ ಒಳ್ಳೇದಾಗಿತ್ತು. ನೀನು ಬೆಚ್ಚಗೂ ಇಲ್ಲದೆ ತಣ್ಣಗೂ ಇಲ್ಲದೆ ಉಗುರು ಬೆಚ್ಚಗಿರುವುದರಿಂದ ನಿನ್ನನ್ನು ನನ್ನ ಬಾಯೊಳಗಿಂದ ಕಾರುವೆನು.**

ನಾವು ಬಿಸಿಬಿಸಿ ಬದ್ಧತೆಯನ್ನು ಹೊಂದಿರಬೇಕು. ಯೇಸುವಿಗೆ ನಮ್ಮ ಬದ್ಧತೆಯು ಉಗುರುಬೆಚ್ಚಗೆ ಇದ್ದರೆ 'ಕೆಲವು ಕೆಲಸಗಳು' ಮುಂದುವರೆಯಲು ಇದು ಸಾಕಾಗುವುದಿಲ್ಲ. ಕರ್ತನಾದ ಯೇಸುಕ್ರಿಸ್ತನಿಗಾಗಿ ನಮ್ಮ ಬಿಸಿ-ಬಿಸಿ ಬದ್ಧತೆಯಿಂದ ಜನ್ಮ ತಾಳದೇ ಇದ್ದರೆ ನಮ್ಮ ಉತ್ತಮ ಕಾರ್ಯಕ್ರಮಗಳು ಅನುಪಯುಕ್ತವಾಗುತ್ತವೆ. ನಾವು ಬಿಸಿಯಾಗಿರಲೂ ಅಥವಾ ತಣ್ಣಗೆ ಇರಲೂ ಎರಡರಲ್ಲೊಂದು ತೀರ್ಮಾನ ಮಾಡಬೇಕು.

ಕೊನೆಯ ದಿನಗಳಲ್ಲಿ ಅನೇಕರ ಪ್ರೀತಿಯು ತಣ್ಣಗಾಗುವುದೆಂದು ಕರ್ತನಾದ ಯೇಸುವು ಎಚ್ಚರಿಕೆ ನೀಡಿದ್ದಾನೆ. ''ಇದಲ್ಲದೆ ಅಧರ್ಮವು ಹೆಚ್ಚಾಗುವುದರಿಂದ ಬಹು ಜನರ ಪ್ರೀತಿಯು ತಣ್ಣಗಾಗಿ ಹೋಗುವುದು ಆದರೆ ಕಡೇವರೆಗೂ ತಾಳುವವನು ರಕ್ಷಣೆ ಹೊಂದುವನು'' (ಮತ್ತಾಯ 24:12,13). ಯೇಸು ಕ್ರಿಸ್ತನಿಗಾಗಿರುವ ನಿಮ್ಮ ಬದ್ಧತೆಯು ಕಡೇವರೆಗೂ ತಾಳಿಕೊಳ್ಳಲೂ ಶಕ್ತಗೊಳಿಸುತ್ತದೆ.

ಈಗ ಬದ್ಧತೆಯಿಂದಿರುವ ಸಮಯವಾಗಿದೆ!

- ನಾವು ಬಿಸಿ-ಬಿಸಿ ಬದ್ಧತೆಯುಳ್ಳವರಾಗಿರಬೇಕು.
- ನಾವು ಉಗುರು ಬೆಚ್ಚಗಿದ್ದರೆ ''ಕೆಲವು ಕೆಲಸಗಳು'' ಜರುಗಲೂ ಇದು ಸಾಕಾಗುವುದಿಲ್ಲ.
- ಕರ್ತನಾದ ಯೇಸುಕ್ರಿಸ್ತನಿಗೆ ಇರುವ ಬಿಸಿ-ಬಿಸಿ ಬದ್ಧತೆಯಿಂದ ಜನ್ಮ ತಾಳದೇ ಇದ್ದರೆ ನಮ್ಮ ಉತ್ತಮ ಕಾರ್ಯಕ್ರಮಗಳು ಅನುಪಯುಕ್ತವಾಗುತ್ತವೆ.

# ನೀವು ಹೊಂದಿಕೊಳ್ಳಲು ಮಾದರಿಗಳು

ಆಲ್ ಪೀಪಲ್ಸ್ ಸಭೆಯು ಉಚಿತವಾಗಿ ವಿದ್ಯುನ್ಮಾನ ಪ್ರತಿಗಳನ್ನು (ಮೈಕ್ರೋಸಾಫ್ಟ್ ಪದ ದಾಖಲೆಗಳನ್ನು) ಯಾವುದಾದರೂ ಅಥವಾ ನಾವು ಉಪಯೋಗಿಸುವಂತಹ ಕೆಳಕಂಡ ದಾಖಲೆಗಳನ್ನು ಒದಗಿಸಲು ಸಂತೋಷವುಳ್ಳವರಾಗಿದ್ದೇವೆ.

ಸಭಾ ಸಿಬ್ಬಂದಿ ಮಾರ್ಗದರ್ಶಿ

ಸಭಾ ಸಿಬ್ಬಂದಿ ಕಾರ್ಯ ನಿರ್ವಹಣೆ ವಿಮರ್ಶೆ ದಾಖಲೆ

ಸಭಾ ಸ್ವಯಂ ಸೇವಕ ಮಾರ್ಗದರ್ಶಿ

ಲೈಫ್‌ಗ್ರೂಪ್ ನಾಯಕರುಗಳು ತರಬೇತಿ ಕೈಪಿಡಿ

ಸಭಾ ಸದಸತ್ವ ಕಿರುಪುಸ್ತಕ

ಮಾರ್ಗದರ್ಶನದ ಮಾರ್ಗದರ್ಶಿ

ಪಾತ್ರ ವಿವರಣೆಯ ಮಾದರಿ

contact@apcwo.orgಗೆ ನೀವು ಇ-ಮೇಲ್ ಕಳುಹಿಸುವ ಮೂಲಕವಾಗಿ ವಿನಂತಿಸಿ-ಕೊಳ್ಳಬಹುದಾಗಿದೆ.

ನಿಮ್ಮ ಸೇವೆಗೆ ಮತ್ತು ಸಭೆಗೆ ಸರಿ ಹೊಂದುತ್ತಿರುವಂತೆ ಉಪಯೋಗಿಸಿ ಮತ್ತು ಮಾರ್ಪಡಿಸಿಕೊಳ್ಳಲು ನೀವು ಸ್ವತಂತ್ರವಾಗಿ ಮಾಡಿರಿ ಉಪಯೋಗಿಸಿರಿ.

# ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವುದು. (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಭೇತಿಗೊಳಿಸುವುದು (ಇ) ಕ್ರಿಸ್ತನ ಅಂಗವನ್ನು ಕಟ್ಟುವುದನ್ನು, ಬಹಳ ಮುಖ್ಯ ಗುರಿಯಾಗಿರಿಸಿಕೊಂಡಿರುವ, ಭಾರತದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಭೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾಸೇವಕರ ಸಮಾವೇಶವನ್ನು ವರ್ಷಪೂರ್ತಿ ನಡೆಸುವುದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಗಳನ್ನು ಉಚಿತವಾಗಿ ಹಂಚುವುದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚುಟಗೆವುಳ್ಳದ್ದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ನಮ್ಮ ಕಛೇರಿಯ ವಿಳಾಸವಾದ "ಆಲ್ ಪೀಪಲ್ಸ್ ಸಭೆ ಬೆಂಗಳೂರು" ಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಹಿಸಬಹುದು

Account Name: All Peoples Church
Account Number: 0057213809,
IFSC Code: CITI0000004
Bank: Citibank N.A., 506-507,
Level 5, Prestige Meridian 2, # 30,
M.G. Road, Bangalore - 560 001

*ದಯವಿಟ್ಟು ಗಮನಿಸಿ: ಆಲ್ ಪೀಫಲ್ಸ್ ಸಭೆಯು FCRA ಅನುಮತಿ ಹೊಂದಿಲ್ಲ ಮತ್ತು ಭಾರತೀಯ ನಾಗರೀಕರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು.*

ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ! ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!

# ಉಚಿತ ಪ್ರಕಾಶನಗಳು ಮತ್ತು ಸಂಗ್ರಹಗಳು

ಕೆಲಸದ ಕಡೆಗೆ ಸತ್ಯವೇದದ ನೋಟ

ನಿನ್ನ ಕರೆಯನ್ನು ಕಡೆಗಣಿಸದಿರು

ನಿರೀಕ್ಷೆಯನ್ನು ಕಳೆದುಕೊಳ್ಳಬೇಡ

ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು

ವೈಯುಕ್ತಿಕ ಮತ್ತು ತಲೆಮಾರಿನ ಬಂಧನಗಳನ್ನು ಮುರಿಯುವುದು

ನಿಮ್ಮ ಸಭಾಪಾಲಕರಿಗೆ ಹೇಗೆ ಸಹಾಯ ಮಾಡುವುದು

ದೇವರ ರಾಜ್ಯ ಕಟ್ಟುವವರು

ಪರಲೋಕವೆಂದು ಕರೆಯಲ್ಪಡುವ ನಿಜ ಸ್ಥಳ

ದೇವರ ಉದ್ದೇಶಗಳಿಗೆ ಜನ್ಮ ಕೊಡುವುದು

ಬೇರುಗಳಿಗೆ ಕೊಡಲಿ ಹಾಕುವುದು

ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ನೆರವೇರಿಸುವುದು

ಉಜ್ಜೀವನದಲ್ಲಿ ಒಂದು ಸಭೆ

ದೇವರ ಪ್ರಸನ್ನತೆ

ಜ್ಞಾನ, ಪ್ರಕಟನೆ ಮತ್ತು ಬಲದ ಆತ್ಮನು

ದೇವರು ಒಳ್ಳೆಯ ದೇವರಾಗಿದ್ದಾನೆ

ಅಸ್ತಿವಾರಗಳು ಭಾಗ – 1

ತೆರೆದ ಪರಲೋಕಗಳು

ಜೀವನದ ರಾತ್ರಿಯ ಸಮಯಗಳು

ಪ್ರಾಮಾಣಿಕತೆ

ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ

ಪರಿವರ್ತನೆ

ಗೌರವದ ಸಂಕೇತ

ದೇವರ ಮನೆ

ಮದುವೆ ಮತ್ತು ಕುಟುಂಬ

ದೈವಿಕ ದಯೆ

ದೈವಿಕ ಕ್ರಮ – ನಗರ ವ್ಯಾಪ್ತಿ ಸಭೆಗಳಲ್ಲಿ

ಶುದ್ಧೀಕರಿಸುವ ಬೆಂಕಿ

ಬದ್ಧತೆಯ ಬಲ

ಜಗಳರಹಿತವಾದ ಜೀವಿತ ಜೀವಿಸುವುದು

ಕೆಲಸ ಮತ್ತು ಅದರ ಮೂಲ ವಿನ್ಯಾಸ

ನಾವು ವಿಭಿನ್ನರು

ತಂದೆಯ ಪ್ರೀತಿ

ನಮ್ಮ ವಿಮೋಚನೆ

ಆತ್ಮಿಕವಾಗಿ ಮನಸುಳ್ಳವರಾಗಿರುವುದು ಲೌಕಿಕ ಜ್ಞಾನವಂತರಾಗಿರುವುದು

ದೇವರ ಮಾರ್ಗದರ್ಶನ ಪಡೆದುಕೊಳ್ಳುವುದು

ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ

ಪ್ರತಿ ಉದ್ದೇಶಕ್ಕೂ ಒಂದು ಸಮಯವಿದೆ

**ಉಚಿತ ಇ-ಪುಸ್ತಕಗಳು**

ನಮ್ಮ ಚರ್ಚ್ ವೆಬ್ ಸೈಟ್‌ಂದ ನಮ್ಮ ಎಲ್ಲಾ ಪುಸ್ತಕಗಳ ಪಿ ಡಿ ಎಫ್ ಅನುವಾದವನ್ನು ಉಚಿತವಾಗಿ ಸಂಗ್ರಹಿಸಲು ದೊರೆಯುತ್ತವೆ. ಇತರೆ ಪ್ರಾದೇಶಿಕ ಭಾಷೆಗಳಲ್ಲೂ ಸಹ ಈ ಪುಸ್ತಕಗಳು ದೊರೆಯುತ್ತದೆ. ಇಂತಹ ಉಚಿತ ಪುಸ್ತಕಗಳಿಗಾಗಿ ಇ-ಮೇಲ್ ಅಥವಾ ಅಂಚೆಯ ಮೂಲಕವಾಗಿ ನಮ್ಮನ್ನು ಸಂಪರ್ಕಿಸಹುದಾಗಿದೆ.

**ಉಚಿತ ಆಡಿಯೋ ಮತ್ತು ವೀಡಿಯೊ ಸಂದೇಶಗಳು**

ಉಚಿತ ಆಡಿಯೋ, ವೀಡಿಯೋ ಸಂದೇಶಗಳು, ಪ್ರಸಂಗದ ಟಿಪ್ಪಣಿಗಳಿಗಾಗಿ ನಮ್ಮ ವೆಬ್‌ಸೈಟನ್ನು ಸಂಪರ್ಕಿಸಿ (apcwo.org/sermons) ಮತ್ತು ಇತರೆ ಅನೇಕ ಅಧ್ಯಯನ ಸಂಗ್ರಹ ಬಳಸಹುದು.

# ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರದಲ್ಲಿ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂಬುದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ನಾವು, ಆತನ ಪವಿತ್ರಾತ್ಮನ ಪ್ರಮಾಣಿಕರಣ ಮತ್ತು ರಾಜಿ ಹೊಂದದ, ಅಭಿಷೇಕಹೊಂದಿದ ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕಕಾರ್ಯ, ಅಧ್ಭುತಕಾರ್ಯ, ಮಹತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವುದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ. (1 ಕೊರಿಂಥದವರಿಗೆ 2: 4,5, ಇಬ್ರಿಯರಿಗೆ 2: 3,4.) ಯೇಸು ನಮ್ಮ ಉದ್ಧೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಫ್ರೌಢತೆ ನಮ್ಮ ಗುರಿಯಾಗಿದೆ.

ಆಲ್‌ಪೀಪಲ್ಸ್ ಸಭೆಯು ಭಾರತದಲ್ಲಿ ಅನೇಕ ಸಭೆಗಳನ್ನು ಹೊಂದಿದೆ ಮತ್ತು ಹೊಸ ಸಭೆಗಳು ನಿಯತಕಾಲಿಕವಾಗಿ ಸ್ಥಾಪಿಸಲ್ಪಡುತ್ತಿವೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಗಳನ್ನು ಪಡೆದುಕೊಳ್ಳಲು, ನಮ್ಮ ವೆಬ್‌ಸೈಟ್‌ನ್ನು ಸಂಪರ್ಕಿಸಿರಿ. www. apcwo.org ಅಥವಾ contact@apcwo.org ಗೆ ಇ-ಮೇಲ್ ಕಳುಹಿಸಿರಿ.

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದಿರೋ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು.

ಆತನು ಪಾಪರಹಿತ ಜೀವನ ನಡಿಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ - ಯೇಸು ಭೂಲೋಕದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕಿವಿಕೇಳುವಂತೆ ಮಾಡಿದನು. ಕುಂಟರನ್ನು ನಡೆದಾಡುವಂತೆ ಮಾಡಿದನು. ಎಲ್ಲಾ ಬಗೆಯ ರೋಗಗಳನ್ನು ವಾಸಿಮಾಡಿದನು. ಹಸಿದ ಜನರಿಗೆ ಐದುರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು. ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಅದ್ಭುತ ಕಾರ್ಯಗಳು ನಮಗೆ ದೇವರು, ಒಳ್ಳೆಯ ದೇವರು, ಆತನು ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಬಯಸುತ್ತಾನೆ. ದೇವರು, ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ಪ್ರಕಟಿಸುತ್ತವೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಅಂಗೀಕಾರವಾಗದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು, ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವುದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಕೆಗೊಳಿಸುತ್ತದೆ. ಅಥವಾ ದೂರಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೇನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು "ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತವಾದ ಕ್ರಿಸ್ತ ಯೇಸುವಿನಲ್ಲಿರವ ನಿತ್ಯಜೀವ" ಎಂದು ಹೇಳುತ್ತದೆ (ರೋಮಪುರ 6:23) ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆಮಾಡಿದ್ದಾನೆ. ಮೂರನೇ ದಿನದಲ್ಲಿ ಎದ್ದು ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು. ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ, ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ನಿಮ್ಮಂತೆಯೇ, ಜನರನ್ನು ಪಾಪದಿಂದ, ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ. ನೀನು ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಮತ್ತು ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

**''ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು''** (ಅಪೊಸ್ತಲರ ಕೃತ್ಯ 10:43)

**''ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬುದೇ''** (ರೋಮಾಪುರದವರಿಗೆ 10:9)

ನೀವು ಸಹ ಯೇಸುಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪರಿಹಾರಗಳನ್ನು ಹೊಂದಿಕೊಳ್ಳಬಹುದು. ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವುದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧೀಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.

*ಪ್ರಿಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದ್ದನ್ನು ಅರ್ಥ ಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರ್‍ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮಾಪಣೆ ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವುದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ ನೀನು ಮಾಡಿದ್ದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನು ರಕ್ಷಿಸಿಕೊಳ್ಳಲು ಆಗುವುದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ ನನ್ನ ಬಾಯಿಂದ, ''ನೀನು ನನಗಾಗಿ ಸತ್ತೇ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ. ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧೀಕರಣ ಪಡೆದುಕೊಂಡೆ'' ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು. ನಿನ್ನನ್ನು ಪ್ರೀತಿಸಲು ಸಹಾಯ ಮಾಡು. ನಿನ್ನನ್ನು ಇನ್ನೂ ತಿಳಿಯಲು ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯಮಾಡು. ಆಮೇನ್*

## DOWNLOAD THE FREE APP!

*Search for*
"All Peoples Church Bangalore"
in the App or Google play stores.

Available on the App Store

ANDROID APP ON Google play




*A daily 5-minute video devotional.*
*A daily Bible reading and prayer guide.*
*5-minute Sermon summary.*
*Toolkit with Scriptures on various topics to build faith and information to share the Gospel.*
*Resources with sermons, sermon notes, TV programs, books, music and more.*

*IF YOU LOVE IT, TELL OTHERS ABOUT IT!*

ಸತ್ಯವೇದ ಶಾಲೆ
ಮತ್ತು ಸೇವಾ ತರಬೇತಿ ಕೇಂದ್ರ

# ಆಲ್ ಪೀಪಲ್ಸ್ ಚರ್ಚ್
# ಸತ್ಯವೇದ ಶಾಲೆ ಮತ್ತು ಸೇವಾ ತರಬೇತಿ ಕೇಂದ್ರ

ಆಲ್ ಪೀಪಲ್ಸ್ ಸಭೆಯ ಸತ್ಯವೇದ ಶಾಲೆ ಮತ್ತು ಸೇವಾ ತರಬೇತಿ ಕೇಂದ್ರವು (APC-BC) ಭಾರತದ ಬೆಂಗಳೂರಿನಲ್ಲಿದೆ. ದೇವರ ವಾಕ್ಯದ ಬೌದ್ಧಿಕವಾದ ಉತ್ಕೃಷ್ಟತೆಯ ಅಧ್ಯಯನ ಮತ್ತು ಸಿದ್ಧಾಂತಗಳ ಉತ್ತಮವಾದ ದೈವಿಕ ಸಿದ್ಧಾಂತಗಳೊಂದಿಗೆ ಪವಿತ್ರಾತ್ಮನ ಅತ್ಯದ್ಭುತವಾದ ಬಲದಲ್ಲಿ ಸೇವೆ ಮಾಡಲೂ ಸಜ್ಜುಗೊಳಿಸುವುದು ಮತ್ತು ಆತ್ಮನಿಂದ ತುಂಬಿದ ಅಭಿಷೇಕ ಹೊಂದಿದ್ದು - ತರಬೇತಿಯನ್ನು ಪಡೆದುಕೊಳ್ಳುವುದನ್ನು ಒದಗಿಸುತ್ತೇವೆ. ಒಬ್ಬ ವ್ಯಕ್ತಿಯನ್ನು ದೈವಿಕ ಗುಣಗಳಿಗೆ ಒತ್ತು ನೀಡುವಂತಹ ಸೇವೆಗಾಗಿ, ದೇವರ ವಾಕ್ಯದಲ್ಲಿ ಆಳವಾಗಿ ಬೇರೂರುವುದಕ್ಕಾಗಿ, ಮತ್ತು ಕರ್ತನೊಂದಿಗಿನ ನಿಕಟವಾದ ಸಂಬಂಧದಲ್ಲಿ ಹೊರ ಹರಿಯುವಂತಹ ಅದ್ಭುತಗಳು, ಸೂಚಕ ಕಾರ್ಯಗಳು ಮತ್ತು ಮಹತ್ಕಾರ್ಯಗಳನ್ನು ಬಲಯುತವಾಗಿ ಪ್ರದರ್ಶಿಸಲು ಅವರನ್ನು ಅಭಿವೃದ್ಧಿಪಡಿಸುವುದನ್ನು ನಾವು ನಂಬುತ್ತೇವೆ.

ಎ.ಪಿ.ಸಿ-ಬಿ.ಸಿ.ಯಲ್ಲಿ ಉತ್ತಮವಾದ ಬೋಧನೆಗಳ ಜೊತೆಗೆ ದೇವರ ಪ್ರೀತಿಯನ್ನು ಪ್ರದರ್ಶಿಸುವುದು, ಅಭಿಷೇಕ ಮತ್ತು ಪವಿತ್ರಾತ್ಮನ ಪ್ರಸನ್ನತೆ ಮತ್ತು ದೇವರ ವಾಕ್ಯದ ಅತ್ಯದ್ಭುತ ಕಾರ್ಯಗಳಿಗೆ ನಾವು ಒತ್ತು ಕೊಡುತ್ತೇವೆ. ಅನೇಕ ಯುವ ಪುರುಷ ಮತ್ತು ಸ್ತ್ರೀಯರು ತರಬೇತಿ ಹೊಂದಿದ್ದಾರೆ ಮತ್ತು ಅವರ ಜೀವಿತಗಳ ಮೇಲೆ ದೇವರ ಕರೆಯನ್ನು ನೆರವೇರಿಸಲು ಕಳುಹಿಸಲ್ಪಟ್ಟಿದ್ದಾರೆ.

ನಾವು ಮೂರು ಕಾರ್ಯಕ್ರಮಗಳನ್ನು ನೀಡುತ್ತೇವೆ:

ಒಂದು ವರ್ಷದ ಸರ್ಟಿಫಿಕೇಟ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (C.Th.)
ಎರಡು ವರ್ಷದ ಡಿಪ್ಲೋಮ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (D.Th.)
ಮೂರು ವರ್ಷದ ಬ್ಯಾಚುಲರ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (B.Th.)

ತರಗತಿಗಳು ವಾರದ ಪ್ರತಿದಿನ ಸೋಮವಾರದಿಂದ ಶುಕ್ರವಾರ ಬೆಳಿಗ್ಗೆ 9 ರಿಂದ ಮಧ್ಯಾಹ್ನ 1ರವರೆಗೆ ಜರುಗುತ್ತದೆ. ದಿನದ ವಿದ್ಯಾರ್ಥಿಗಳು, ಕೆಲಸ ಮಾಡುವ ವೃತ್ತಿಪರರು ಮತ್ತು ಮನೆಯಲ್ಲಿ ಇರುವವರು ಇಂತಹ ತರಗತಿಗಳಿಗೆ ಹಾಜರಾಗಬಹುದು ಮತ್ತು ಮಧ್ಯಾಹ್ನ 1 ರ ನಂತರ ಅವರ ಕೆಲಸಗಳನ್ನು ಮುಂದುವರೆಸಬಹುದು.

ವಸತಿನಿಲಯ: ಇಚ್ಛಿಸುವಂತಹ ವಿದ್ಯಾರ್ಥಿ / ವಿದ್ಯಾರ್ಥಿನಿಯರುಗಳಿಗೆ ಪ್ರತ್ಯೇಕ ವಸತಿ ವ್ಯವಸ್ಥೆ ದೊರೆಯುತ್ತದೆ. ವಿದ್ಯಾರ್ಥಿಗಳು ಸೇವಕರುಗಳು ವಿಶೇಷ ಸಮಾವೇಶಗಳು ಮಧ್ಯಾಹ್ನದ ಅವಧಿಗಳಲ್ಲಿ, ಪ್ರಾರ್ಥನೆ ಮತ್ತು ಆರಾಧನೆ ಸಮಯದಲ್ಲಿ ಪ್ರತಿವಾರದ ದಿನ ಮಧ್ಯಾಹ್ನ 2 ರಿಂದ ೫ರವರೆಗೆ ಭಾಗವಹಿಸುವರು. ಮಧ್ಯಾಹ್ನದ ತರಗತಿಗಳು ದಿನದ ವಿದ್ಯಾರ್ಥಿಗಳಿಗೆ (ವಸತಿ ಬಯಸದ) ಐಚ್ಛಿಕ ವಿಷಯವಾಗಿದೆ. ಎಲ್ಲಾ ವಿದ್ಯಾರ್ಥಿಗಳು ವಾರಾಂತ್ಯದ ದಿನದಲ್ಲಿ ಒಂದು ಅಥವಾ ಅನೇಕ ಸ್ಥಳೀಯ ಸಭೆಗಳಲ್ಲಿ ಸೇವೆ ಮಾಡಲು ಪ್ರೋತ್ಸಾಹಿಸಲಾಗುತ್ತದೆ.

ಸತ್ಯವೇದ ಶಾಲೆ, ಕೊಡಲ್ಪಡುವಂತಹ ವಿವಿಧ ಕಾರ್ಯಕ್ರಮಗಳು, ಕಲಿಕಾ ವಿಷಯಾಂಶಗಳು ಮತ್ತು ಅರ್ಜಿಯನ್ನು ಡೌನ್‌ಲೋಡ್ ಮಾಡಲು apcwo.org/biblecollege ಅನ್ನು ಸಂಪರ್ಕಿಸಿ.

APC-BC is accredited by the
Nations Association for Theological
Accreditation (NATA).

ಇಂದಿನ ಪ್ರಪಂಚದಲ್ಲಿ, ಬದ್ಧತೆಯು ಕಂಡುಬರುವ ಕಷ್ಟಕರವಾದ ಸದ್ಗುಣವಾಗಿದೆ. ನಮ್ಮಲ್ಲಿ ಅನೇಕರು ಅನುಕೂಲಕವಾದದ್ದನ್ನು ಮಾಡುತ್ತಾರೆ. ಬದ್ಧತೆಯುಂದಯಿರುವ ಜನರು ಹೆಚ್ಚು ಕಷ್ಟಕರವಾಗಿ ಕಂಡು ಬರುವುದನ್ನು ಗುರ್ತಿಸುತ್ತೇವೆ.

ಬದ್ಧತೆಯುಂದಿರುವುದರ ಕುರಿತು ಸತ್ಯವೇದವು ನಮಗೆ ಬೋಧಿಸುತ್ತದೆ. ಕರ್ತನಾದ ಯೆಸು ಹೀಗೆ ವ್ಯಾಖ್ಯಾನಿಸಿದ್ದಾನೆ. "ಯಾವನೂ ಇಬ್ಬರು ಯಜಮಾನರಿಗೆ ಸೇವೆ ಮಾಡಲಾರನು. ಅವನು ಒಬ್ಬನನ್ನು ದ್ವೇಷಿಸಿ ಮತ್ತೊಬ್ಬನನ್ನು ಪ್ರೀತಿಸುವನು ಇಲ್ಲವೆ ಒಬ್ಬನನ್ನು ಹೊಂದಿಕೊಂಡು ಮತ್ತೊಬ್ಬನನ್ನು ತಾತ್ಸಾರ ಮಾಡುವನು ನೀವು ದೇವರನ್ನು ಧನವನ್ನೂ ಕೂಡ ಸೇವಿಸಲಾರಿರಿ (ಮತ್ತಾಯ 6:24). ನಮ್ಮ ಅಂತರ್ಗತವಾಗಿರುವ ಇಂತಹ ಸ್ವಭಾವವನ್ನು ಇಲ್ಲಿ ಯೇಸುವು ಸೂಚಿಸುತ್ತಾನೆ. ಒಬ್ಬರಿಗೊಬ್ಬರು ವಿರುದ್ಧವಾದ ಎರಡು ಬದ್ಧತೆಯನ್ನು ಮನುಷ್ಯನು ನೆರವೇರಿಸಲಾಗದು. ಈ ಪುಸ್ತಕವು ಬದ್ಧತೆಯ ಬಲದ ಮೇಲೆ ಮಹತ್ವ ನೀಡುತ್ತದೆ ಮತ್ತು ನೀವು ಮಾಡುವಂತದ್ದರಲ್ಲಿ, ಬದ್ಧತೆಯುಂದಿರಬೇಕೆಂಬುದಾಗಿ ಸ್ಪೂರ್ತಿ ನೀಡುತ್ತದೆ. ಈಗ ಬದ್ಧತೆಯುಂದಿರುವ ಗಳಿಗೆಯಾಗಿದೆ|

ಆಶಿಷ್ ರಾಯ್‌ಚೂರ್

**All Peoples Church & World Outreach**
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617
Email: contact@apcwo.org
Website: apcwo.org